ಬಾಳಿಕೆಯ ಅವಧಿ ಮುಗಿದಿದ್ದುದರಿಂದ ಸ್ಥಗಿತಗೊಳಿಸಿ ಆದರ ಬದಲಾಗಿ ಒಂದು ಹೊಸ ನಾವೆಯನ್ನ ಖರೀದಿಸಲು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಈ ಸಂಬಂಧದಲ್ಲಿ ಆದೇಶ ಹೊರಡಿಸಲಾಗಿದೆ. ಇನ್ನೊಂದು ಫೆರೊ ಸಿಮೆಂಟ್ ನಾವೆಯು ಸತತ ಚಾಲನೆಯಿಂದ ತಳಭಾಗದಲ್ಲಿ ಅವಶ್ಯಕ ದುರಸ್ತಿ ಕೆಲಸಗಳನ್ನು ಕೈಗೊಳ್ಳಬೇಕಾದುದರಿಂದ ಈ ನಾವೆಗಳನ್ನು ಸ್ಥಗಿತಗೊಳಿಸಲಾಗಿತ್ತು. ಈ ನಾವೆಗೆ ಸಿಮೆಂಟ್ ಲೇಪನ ಮಾಡಿ ದುರಸ್ತಿ ಕೆಲಸ ಕೈಗೊಂಡಿದ್ದು ವರ್ಷ ಖಿತುವಾಗಿದ್ದರಿಂದ ಇದು ಒಣಗಲು (ಕ್ಯೂರಿಂಗ್‌ಗೆ) ಸ್ವಲ್ಪ ಕಾಲವಕಾಶ ಹಿಡಿದಿದ್ದು ಈ ಸಮಯದಲ್ಲಿ ಕಡವಿನ ಸೇವೆಯು ಸ್ಥಗಿತಗೊಂಡಿತ್ತು. ನಾವೆಯ ದುರಸ್ತಿ ನಂತರ, ಕಡವಿನ ಸೇವೆಗೆ ದಿನಾಂಕ 10-7-90ರಿಂದ ತೊಡಗಿಸಿದ್ದು, ಕಡವು ಸೇವೆಯನ್ನು ಪುನಃ ಪ್ರಾರಂಭಿಸಲಾಗಿತ್ತು. ಈ ನಾವೆಯ ಸಣ್ಣ ಪುಟ್ಟ ದುರಸ್ತಿಗಳನ್ನು ಶೀಘ್ರವಾಗಿ ಕೈಗೊಳ್ಳಲಾಗುವುದು.

ಸರ್ಕಾರಿ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ 55 ಬಂಒಜ 90, ದಿನಾಂಕ 14-3-91ರಲ್ಲಿ 2 ಮರದ ಮೂಗ ನಾವೆಗಳು, 2 ಫೈಬರ್‌ಗ್ಲಾಸ್ ನಾವೆಗಳು ಮತ್ತು 2 ಯಂತ್ರಚಾಲಿತ ಉಕ್ಕಿನ ನಾವೆಗಳನ್ನು 14.00 ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ಖರೀದಿಸಲು ಮಂಜೂರಾತಿ ನೀಡಿದೆ. ಇವುಗಳಲ್ಲಿ 2 ನಾವೆಗಳಿಗೆ ಬಂದರು ಮತ್ತು ಒಳನಾಡು ಜಲಸಾರಿಗೆ ನಿರ್ದೇಶಕರು ದಿನಾಂಕ 10-7-91ರಂದು ಕಾರ್ಯಾದೇಶ ನೀಡಿರುವರೆಂದು ತಿಳಿದು ಬಂದಿದೆ. ಈ ನಾವೆಗಳನ್ನು ಶೀಘ್ರವಾಗಿ ಒದಗಿಸಿಕೊಂಡು ಕೂಡಲೇ ಸದರಿ ಕಡವು ಸೇವೆಯಲ್ಲಿ ತೊಡಗಿಸಲು ಕ್ರಮ ಕೈಗೊಳ್ಳಲಾಗುವುದು.

7) ಬೆಂಗಳೂರಿನ ಜೆ.ಸಿ. ರಸ್ತೆಯಲ್ಲಿರುವ ಶ್ರೀ ಅಂಜುಮನೆ ಮಹದೇವಯ್ಯನವರ ಜಾಗದಲ್ಲಿ ಅನಧಿಕೃತವಾಗಿ ವಾಸವಾಗಿರುವುದು.

SRI R. DAYANANDA RAO: Madam Deputy Speaker, on behalf of Sri Sadat Ali Khan I would like to mention:

In the year 1987, the then Chief Minister had passed orders to vacate the unauthorised occupation of site belonging to Anjumane Mahadevaiah, Bangalore by Ramanna D'Souza Slum at J.C. Road, Bangalore. So far , the unauthorised occupation has not been vacated and land was not handed over to Anjumane Mahadeviah. Will the Government take immediate action to get the unauthorised occupation vacated and hand over the land to the institution?

SRI K. SHIVA MURTHY: On behalf of the Minister for Housing and Urban Development, I would like to make the following statement:

Karnataka Slum Clearance Board in its Board meeting held on 9-6-1987 has resolved to shift the slum dwellers of Ramanna D'Souza garden, J.C. Road after getting the land value and shifting charges from the land owners and after getting declared the said area u/s 3 and 11 of KSA (I & C) Act. 73 as slum area and slum clearance area. Accordingly the Deputy Commissioner, Bangalore has declared the said area u/s 3 (F) vide notification dtd.21.3.1989. The proposal is built up for declaring the area u/s 11 of the Act. Since there is no suitable land provided by the land owners, shifting work is still pending. Further action will be taken after obtaining consent of the land-lord regarding payment of land value, shifting charges , development charges, etc, as per

the resolution of the Karnataka Slum Clearance Board. The matter is under correspondence with the Land-Lord.

ಶಾಸನ ರಚನೆ

ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕ, 1991
ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಯವರು) : ಮಾನ್ಯ ಉಪಾಧಕ್ಷಣೆಯವರೇ ನಾನು 1991ನೇ ಸಾಲಿನ ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷಣೇಯವರು: ಪ್ರಸ್ತಾಪ ಏನೆಂದರೆ 1991ನೇ ಸಾಲಿನ ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷಣೆಯವರೇ 1991ನೇ ಸಾಲಿನ ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷಣೇಯವರು: ವಿಧೇಯಕವನ್ನು ಮಂಡಿಸಲಾಗಿದೆ.

ಅನುಬಂಧ

ವಿತ್ತೀಯ ಕಾರ್ಯಕಲಾಪಗಳು

1991-92ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

+ ಶ್ರೀ ಆರ್. ದಯಾನಂದ ರಾವ್ (ಗಾಂಧಿನಗರ) : ಮಾನ್ಯ ಅಧ್ಯಕ್ಷರೇ, ನಾನು 1991-92ನೇ ಸಾಲಿನ ಆಯವ್ಯಯವನ್ನು ಸದನದಲ್ಲಿ ಮಂಡಿಸಿರುವುದನ್ನು ಸ್ವಾಗತಿಸುತ್ತಾ ನನ್ನ ಸಲಹೆಗಳನ್ನು ಕೊಡಲಿಕ್ಕೆ ಇಚ್ಛಿಪಡುತ್ತೇನೆ. ನಮ್ಮ ಮುಖ್ಯಮಂತ್ರಿಯವರು ಒಂದು ಒಳ್ಳೆಯ ಆಯವ್ಯಯವನ್ನು ಕರ್ನಾಟಕ ಜನರಿಗೆ ಕೊಟ್ಟಿದ್ದಾರೆ. ಇದರಲ್ಲಿ ಸಾಕಷ್ಟು ಬಡ ಜನರಿಗೆ ಒಳ್ಳೊಳ್ಳೆಯ ಯೋಜನೆಗಳನ್ನು ನಮ್ಮ ಸರ್ಕಾರ ಇವತ್ತು ಕೊಟ್ಟಿದೆ ಎಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಅದರಲ್ಲಿಯೂ ಸಹ ಇವತ್ತು ನಮ್ಮ ಮುಖ್ಯ ಮಂತ್ರಿಯವರು ಯೋಜನೆಗಳನ್ನು ಹಾಕಿಕೊಂಡು ಗ್ರಾಮಾಂತರ ಜನರಿಗೆ ಕಾರ್ಯಕ್ರಮವನ್ನು ಕೊಟ್ಟಿದ್ದಾರೆ.

ಇನ್ನು 1991-92ರ ಆಯವ್ಯಯದಲ್ಲಿ ಕೊರತೆಯ ಹಣವನ್ನು 56 ಕೋಟಿ ರೂಪಾಯಿಗೆ ಇಳಿಸಿ ಇವೊತ್ತಿನ ದಿವಸ ಒಂದು ಒಳ್ಳೆಯ ಬಜೆಟ್ಟನ್ನು ಕೊಟ್ಟಿದ್ದಾರೆ ಎಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ನಾನು ಮೊದಲನೆಯದಾಗಿ ಬೆಂಗಳೂರು ನಗರಾಭಿವೃದ್ಧಿಯ ಪರವಾಗಿ ಕೆಲವು ಸಲಹೆಗಳನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ಇವೊತ್ತು ಬೆಂಗಳೂರು ನಗರ ಸಿಕ್ಕಾಪಟ್ಟೆ ಬೆಳೆಯುತ್ತಿದೆ, ಇದನ್ನು ಸರ್ಕಾರ ಅದಷ್ಟು ತಡೆಗಟ್ಟಬೇಕಾಗಿದೆ. ಇದನ್ನು ತಡೆಗಟ್ಟದಿದ್ದರೆ ತುಂಬಾ ಕಷ್ಟವಾಗುತ್ತದೆ. ಇವೊತ್ತು ಬೆಂಗಳೂರು ನಗರದಲ್ಲಿ ನೀರಿನ ಬವಣೆ ಜಾಸ್ತಿಯಾಗುತ್ತಿದೆ. ಆದ್ದರಿಂದ, ಸುಮಾರು ಇವೊತ್ತು 40ರಿಂದ 50 ಲಕ್ಷ ಜನಸಂಖ್ಯೆಗೆ, ನೀರಿನ ವ್ಯವಸ್ತೆಯನ್ನು ಮಾಡಬೇಕಾಗಿದೆ.